# ‘ದೇವರೇ...’



ದೇವರೆ, ನಿನ್ನ ಪಾದದಡಿ
ನೂರು ರಕ್ಕಸರು ನಲುಗಿ
ಪಾತಾಳ ಸೇರಿದ್ದಾಯಿತು
ನಿನ್ನ ಈ ಪಾದಕ್ಕೆ
ಸಾವಿರ ಭಕ್ತರು ವಂದಿಸಿ
ಬೇಡಿಕೆಗಳನ್ನಿಟ್ಟು ಗೂಡು
ಸೇರಿದ್ದಾಯ್ತು

ನನ್ನದೊಂದೇ ಒಂದು ಬೇಡಿಕೆ
ಆಲಿಸುವೆಯಾ ನೀನು?
ಛೆ! ಛೆ! ಇದಕ್ಕಾಗೇ ನಾನು ನಿನ್ನ
ಪಾದಕ್ಕೆ ನೀರೆರೆಯುತಿರುವೆ ಎಂದು
ತಪ್ಪು ತಿಳಿಯಬೇಡ!
ಅನುದಿನವು ಮಾಡುವ ಈ ಕಾಯಕದಲ್ಲೂ
ಒಂದು ಜಾದೂ ಇದೆ
ನಿನ್ನೊಂದಿಗೆ ಮಾತಾಡುವ
ಅವಕಾಶ ಇದಾಗಿದೆ
ಬೇರೆ ಯಾರ ಗೊಡವೆಯೂ
ಇರದು ನನಗೀಗ!

ಹಾಂ! ಮೊನ್ನೆ ಅಂಗಡಿಯಿಂದ
ಬರುವಾಗ ಟೂ ಬಿಟ್ಟ
ಗೆಳತಿಯ ಮಾತುಗಳು
ಕಿವಿಗೆ ಬೀಳುವಂತೆ ಮಾಡು
ದೇವರೇ... ಇದೊಂದೇ
ನನ್ನ ಪುಟ್ಟ ಬೇಡಿಕೆ!

● ಎಂ.ಎನ್‌. ಯಶಸ್ವಿನಿ

# ಮಹಾಪಾದ

ಇದು ಬರಿದೆ ಪಾದವಲ್ಲ
ಬದುಕು ಕಟ್ಟುವ ಪಾದ
ಹಸಿದ ಹೊಟ್ಟೆಗಳಿಗೆ ಅನ್ನ
ಮಾನ ಮುಚ್ಚಲು ಬಟ್ಟೆ
ಮಕ್ಕಳಿಗೆ ವಿದ್ಯೆ
ಮಲಗಲೊಂದು ಸೂರು
ಎಲ್ಲಕೂ ದಾರಿ ಈ ಪಾದ

ಅಚ್ಚು ಹಾಕುತಿರಲೇಬೇಕು
ಹಿಂದೆಯೇ ಬಣ್ಣಗಳ ಮೇಳ
ಪ್ರದರ್ಶನದಲುಂಟು ಸ್ಪರ್ಧೆ
ಥಳುಕು ಬಳುಕು ಇದ್ದರೇ ಸರಿ
ಅದಕೆಂದೆ ಅನುದಿನವು
ಗಮನಿಸಲೇಬೇಕು
ಆಗಿರಲಿ ಪಾದ ಸದಾ ಶುದ್ಧ

ಬದುಕಿನ ಹೆಜ್ಜೆಗಳಿಗಾಗಿ
ಮುಂದೆ ಸಾಗಬೇಕು ನೀನು
ಬೇಡುವೆನು ಓ ಚರಣ
ಹೊಳೆಯುತ್ತಿರು ಅನುಕ್ಷಣ
ಬಣ್ಣಗಳನು ಉಳಿಸಿಕೋ
ನಮ್ಮನೂ ಉಳಿಸು.

ಬದುಕು ನೀಡುವ ಪಾದ
ಮನೆಗಳನು ಮನಗಳನು
ಬೆಳಗುವ ಪಾದ.
ಮಹಾಪಾದ.

● ಸುಬ್ಬಲಕ್ಷ್ಮಿ ಎಚ್‌.ಕೆ.